ಶ್ರೀ ಸಿ.ಚನ್ನಿಗಪ್ಪ: ಮಾನ್ಯ ಅಧ್ಯಕ್ಷರೇ, ಸತ್ತಿದ್ದು ತಿಳಿದ ತಕ್ಷಣ ಆದೇಶ ಮಾಡಿದ್ದೇವೆ, ಅದಕ್ಕೆ ಕಾರಣ ಏನು ಅಂತ ತಿಳಿದುಕೊಳ್ಳಲು ಅದರ ಬಗ್ಗೆ ಡಾಕ್ಟರ್ ಎಲ್ಲಾ ಹೋಗಿದ್ದಾರೆ. ನಮ್ಮ ಆಫೀಸರ್ಸ್ ಹೋಗಿದ್ದಾರೆ. ಅವರಿಂದ ವರದಿ ಬಂದ ತಕ್ಷಣ ನಾನು ವಿಷಯ ತಿಳಿಸುತ್ತೇನೆ. ಇನ್ನೂ ವರದಿ ಖಚಿತವಾಗಿ ಗೊತ್ತಾಗಿಲ್ಲ.

(ಈ) ಹೊಸ ನಗರ ತಾಲ್ಲೂಕಿನ ಅಣಿಗೆರೆವಲಯ ಶೆಟ್ಟಿಹಳ್ಳಿ ಅಭಯಾರಣ್ಯದಲ್ಲಿ ಆಗಿದೆಯನ್ನಲಾದ ಭೇಟಿ ಬಗ್ಗೆ

ಶ್ರೀ ಹೆಚ್. ಹಾಲಪ್ಪ: ಮಾನ್ಯ ಅಧ್ಯಕ್ಷರೇ, ನನ್ನ ಮತಕ್ಷೇತ್ರದ ಅಣಿಗೆರೆ, ಶೆಟ್ಟಿಹಳ್ಳಿ, ಅಭಯಾರಣ್ಯ ಹಣಿಗೆರೆ ವಲಯ, ಇಲ್ಲಿ ಚಿತ್ರದುರ್ಗದ ಒಬ್ಬ ಜಿಲ್ಲಾ ಮಟ್ಟದ ಅಧಿಕಾರಿ, ಜಿಲ್ಲಾ ಯುವಜನ ಸೇವಾ ಅಧಿಕಾರಿ ಚಿತ್ರದುರ್ಗ, ಇವರ ನೇತೃತ್ವದಲ್ಲಿ 6 ಜನರು ಒಂದು ಭೇಟೆಗಾರರ ತಂಡ ಭೇಟೆಯಾಡಲಿಕ್ಕೆ ಹೋಗಿದ್ದಾರೆ. ಅವರು ವ್ಯವಸ್ಥಿತವಾದ ಒಂದು ಜೀಪನ್ನು ಮಾಡಿಕೊಂಡು ಅದರಲ್ಲಿ ಆಧುನಿಕ ಗನ್‌ಗಳು ಮತ್ತು ಅಮೇರಿಕನ್‌ಮೇಡ್ ಸರ್ಚ್‌ಲೈಟ್ ಅಂತ ಏನು ಹೇಳುತ್ತಾರೆ, ಅದನ್ನು ಹಾಕಿಕೊಂಡು ಭೇಟೆಗೆ ಹೋದಾಗ ಸಾರ್ವಜನಿಕರ ಸಹಕಾರದೊಂದಿಗೆ ಅವರನ್ನು ಹಿಡಿದಿದ್ದಾರೆ. ಆದರೆ ಈ ಯುವಜನ ಸೇವಾ ಅಧಿಕಾರಿಯನ್ನು ರೇಂಜ್ ಆಫೀಸ್‌ಗೆ ಕರೆದುಕೊಂಡು ಹೋದ ಮೇಲೆ ಬಿಟ್ಟಿದ್ದಾರೆ. ಈಗ ಅವರು ತಪ್ಪಿಸಿಕೊಂಡಿದ್ದಾರೆ. ಮತ್ತು ಇದು ಬಹಳ ದಿನದಿಂದ ನಡೆಯುತ್ತಿದೆ. ಈ ಜೀಪನ್ನು ನಾನೂ ಸಹ ಸ್ವತಃ ಹೋಗಿ ನೋಡಿದ್ದೇನೆ. ಅಲ್ಲಿ ಅವರು ಬಹಳ ವ್ಯವಸ್ಥಿತವಾಗಿ ಬೇಕಾದಂತಹ ಎಲ್ಲಾ ಪರಿಕರಗಳನ್ನು ಮಾಡಿಕೊಂಡಿದ್ದಾರೆ. ಅವರ ಸೀಟಿನ ಹಿಂದುಗಡೆ ಎರಡು ಗನ್‌ಗಳನ್ನು ಮುಚ್ಚಿಟ್ಟಿದ್ದರು. ಅದನ್ನು ಇಡುವುದಕ್ಕೇ ಬೇಕಾದ ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಇದು ಬಹಳ ದಿನದಿಂದ ನಡೆಯುತ್ತಿದೆ. ಈ ಅಧಿಕಾರಿಯನ್ನು ಏಕೆ ಬಿಟ್ಟರು. ಇದರಲ್ಲಿ ಆರ್.ಎಫ್.ಓ.ಮಂಜುನಾತ್ ಅಂತ ಒಬ್ಬ ಅಧಿಕಾರಿ. ಅವರ ಆಫೀಸ್‌ಗೆ ಕರೆದುಕೊಂಡು ಹೋಗಿ ಬಿಟ್ಟಿದ್ದಾರೆ. ಅವರ ಮೇಲೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಆ ಅಧಿಕಾರಿಯನ್ನು ಈಗ ಸಸ್ಪೆಂಡ್ ಮಾಡಿದ್ದಿರಾ? ಈ ರೀತಿ ಬಿಟ್ಟ ಅಧಿಕಾರಿ ಮೇಲೆ ಯಾವ ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಾವು ದಯವಿಟ್ಟು ತಿಳಿಸಬೆಕು. ಇದು ಬಹಳ ದಿನದಿಂದ ನಡೆಯುತ್ತಿದೆ. ಇದು ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಟಿ.ವಿ.ಯಲ್ಲಿ ಬಂದಿದೆ. ಅವರು ಅಭಯಾರಣ್ಯದಲ್ಲಿಯೇ ಏನು ಮಾಡುತ್ತಿದ್ದಾರೆ. ಮತ್ತೆ ವಲಯಾಧಿಕಾರಿ ಯಾರು ಬಿಟ್ಟಿದ್ದಾನೆ ಈ ಮಂಜುನಾಥ್ ಎನ್ನುವವನು ಅವ ಕ್ವಾರ್ಟ್ರಸ್ ಮತ್ತು ಅವರ ರೇಂಜ್ ಆಫೀಸ್ ಪಕ್ಕಕ್ಕೆ ಈ ಯುವಜನ ಸೇವಾ

ಅಧಿಕಾರಿಯ ತೋಟ ಇದೆ. ಅವನು ಎರಡು ಎಕರೆ ಜಮೀನು ತೆಗದುಕೊಂಡಿದ್ದಾನೆ. ಇದರಲ್ಲಿ ದಕ್ಷಿಣ ಕನ್ನಡ, ಉಡುಪಿ, ಮತ್ತು ಶಿವಮೊಗ್ಗ, ಚಿತ್ರದುರ್ಗ ಈ ನಾಲ್ಕು ಜಿಲ್ಲೆಯವರೂ ಇದ್ದಾರೆ . ಇದು ಬಹಳ ದಿನದಿಂದ ನಡೆಯುತ್ತಿದೆ. ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ತಿಳಿಸಬೇಕೆಂದು ನಾನು ಕೇಳುತ್ತೇನೆ.

ಶ್ರೀ ಸಿ.ಚನ್ನಿಗಪ್ಪ: ಮಾನ್ಯ ಅಧ್ಯಕ್ಷರೇ, 21.3.06ರಂದು ಕೆಲವರು ಬೇಟೆಯಾಡಲು ಹೊರಟಿದ್ದಾರೆ. ಶಿವಮೊಗ್ಗ ಇರಬಹುದು, ಭದ್ರಾವತಿ ಇರಬಹುದು ಮಂಗಳೂರು ಇರುಬಹುದು, ಆ ಒಂದು ಹವ್ಯಾಶ ಇಟ್ಟುಕೊಂಡು ಆ ಕೆಲಸ ಮಾಡಿದ್ದಾರೆ. ನಮ್ಮ ಸಿಬ್ಬಂದಿ ಸುಮ್ಮನೆ ಕೂತಿಲ್ಲ. ನಮ್ಮ ಸಿಬ್ಬಂದಿ ಆ ಸಂದರ್ಭದಲ್ಲಿ ಏನು ಕಾರ್ಯಾಚರಣೆ ಮಾಡುತ್ತಿದ್ದರು, ಆಗ ಅವು ಇವರುಗಳು ಅವರ ಕೈಗೆ ಸಿಕ್ಕಿ ಹಾಕಿಕೊಂಡಿದ್ದಾರೆ. ಅದರಲ್ಲಿ 4 ಜನರನ್ನು ಬಂಧಿಸಿ, ಅವರನ್ನು ಕೋರ್ಟಿಗೆ ಪ್ರೋಡ್ಯೂಸ್ ಮಾಡಿ ಜೈಲಿಗೆ ಕಳುಹಿಸಿದ್ದಾರೆ. ಒಬ್ಬರು ಅಧಿಕಾರಿ ಇನ್ನೊಬ್ಬ ಪ್ರೈವೇಟ್ ಪರ್ಸನ್. ಅವರು ಸಿಕ್ಕದೇ ತಪ್ಪಿಸಿಕೊಂಡು ಹೋಗಿದ್ದಾರೆ. ಅದರಲ್ಲಿ ಪ್ರತಾಪ್‌ಕುಮಾರ್ ಎನ್ನುವವರನ್ನು ಸಸ್ಪೆಂಡ್ ಮಾಡಲು ಆ ಇಲಾಖಾಗೆ ಬರೆದು ಅವರು ಸಸ್ಪೆಂಡು ಆಗಿದ್ದಾರೆ. ಇನ್ನೊಬ್ಬರು ಸಿಕ್ಕಿಲ್ಲ. ನಾನು ಪೊಲೀಸ್ ಇಲಾಖೆಗೂ ನಮ್ಮ ಇಲಾಖೆಗೂ ಇವತ್ತು ಆರ್ಡರ್ ಮಾಡಿ ಅವರನ್ನು ಹುಡುಕಿ ದಸ್ತಗಿರಿ ಮಾಡಲು ಹೇಳಿದ್ದೇನೆ. ಒಂದು ವಾರದಲ್ಲಿ ಅದನ್ನು ಮಾಡಿಸುತ್ತೇನೆ. ಮತ್ತೆ ಮಾನ್ಯ ಹಾಲಪ್ಪನವರು ಹೇಳಿದಂತೆ ಅವರ ಅವರ ಅರಣ್ಯ ಭಾಗದಲ್ಲಿರತಕ್ಕಂತ ಕಾಡು ಪ್ರಾಣಿಗಳಿಗೆ ಭೇಟಿಯಾಡುವಂತಹ ಜನರು ಯಾರು ಅದಂರೆ ಲೋಕಲ್‌ನವರು. ಅವರ್ಯಾರೆಂದು ನಾವು ಕಂಡುಹಿಡಿಯಬೇಕಾದರೆ ನಮಗೆ ಹಾಲಪ್ಪನವರ ಸಹಕಾರಬೇಕು, ಬರಿ ಅಧಿಕಾರಿಗಳೇ ಅಲ್ಲ. ದಯಮಾಡಿ ನಾನು ವಿನಂತಿ ಮಾಡುವುದೇನೆಂದರೆ, ಆ ಕಾಡು ಪ್ರಾಣಿಗಳನ್ನು ಭೇಟಿಯಾಡುವ ಜನರ ನಿಮಗೆ ಗೊತ್ತಿದ್ದರೆ ದಯಮಾಡಿ ಅದನ್ನು ಸಿಕ್ರೇಟ್ ಆಗಿ ನನಗೆ ತಿಳಿಸಬೇಕೆಂದು ಈ ಸದನದಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಹೆಚ್. ಹಾಲಪ್ಪ: ಹಿಂದೆ ಅವರು ಶೃಂಗೇರಿಯಲ್ಲಿದ್ದಾಗ ಅವರು ಸಸ್ಪೆಂಡ್ ಆಗಿ ಅವರ ಮೇಲೆ ಎನ್‌ಕ್ವೊರಿ ಇದೆ. ಒಬ್ಬ ಜಿಲ್ಲಾ ಮಟ್ಟದ ಅಧಿಕಾರಿ ಇದರಲ್ಲಿ ಇನ್‌ವಾಲ್ವ್ ಆಗಿದ್ದಾನೆ ಅವನು 15 ದಿವಸದಿಂದ ತಪ್ಪಿಸಿಕೊಂಡು ಓಡಾಡುತ್ತಾನೆ. ನಾವು ಸರ್ಕಾರದ ದಕ್ಷತೆಯ ಬಗ್ಗೆ ಕೇಳುತ್ತಿಲ್ಲ. ನೀವು ದಕ್ಷರು ಸರಿ, ಆದರೆ ಇವತ್ತಿಗೆ 15 ದಿವಗಳಾಯಿತು. ನಿಮ್ಮ ಅಧಿಕಾರಿಗಳೇನು ಮಾಡುತ್ತಿದ್ದಾರೆ. ಒಬ್ಬ ಜಿಲ್ಲಾಮಟ್ಟದ ಅಧಿಕಾರಿಯನ್ನು ಹಿಡಿಯಲಾಗಲಿಲ್ಲವೆಂದರೆ

ಇನ್ನು ವೀರಪ್ಪನ್, ಮಿನಿ ವೀರಪ್ಪನ್‌ಗಳನ್ನು ಹಿಡಿಯುವುದೇಲ್ಲಿ? ಅವನು ಎಲ್ಲಿ ಹೋಗುತ್ತಾನೆ? ಏತಕ್ಕೆ ತಪ್ಪಿಸಿಕೊಂಡಿದ್ದಾನೆ? ಮಂತ್ರಿಗಳೇ ನಿಮಗೆ ಗೊತ್ತಲ್ಲ, ಅಲ್ಲಿ ನೋಡಿದ ಜನರಿದ್ದಾರೆ, ಅವನನ್ನು ಆರ್.ಎಫ್.ಓ ಕಛೇರಿಗೆ ಕರೆದುಕೊಂಡು ಬಂದು ಅಮೇಲೆ ಬಿಟ್ಟಿದ್ದಾರೆ: ಪ್ರತಾಪ್‌ಕುಮಾರ್ ಎಂಬುವನನ್ನು, ರೇಂಜ್ ಆಫೀಸಿಗೆ ಕರೆದುಕೊಂಡು ಬಂದು ಜಿಲ್ಲಾ ಮಟ್ಟದ ಅಧಿಕಾರಿ ಎಂದು ಗೊತ್ತಾದ ಮೇಲೆ ಬಿಟ್ಟಿದ್ದಾರೆ; ಈ ಅರಪ್‌ಎಫ್‌ಗೆ ಪಕ್ಕದ ಆರ್.ಎಫ್.ಎಫ್.ಗ ಜಮೀನು. ಪ್ರತಿದಿನ ಅವನು ನೋಡುತ್ತಾನೆ, ಹತ್ತಾರು ಸಾರಿ ಜೀಪ್‌ನಲ್ಲಿ ಬಂದು ಹೋಗಿದ್ದಾರೆ. ಇದು ಒಂದೇ ಸಾರಿ ಆಗಿದ್ದಲ್ಲ, ಅಮೇರಿಕಾದಿಂದ ತಂದಿರುವ ಲೈಟ್‌ನ್ನು ಹಾಕಿದರೆ ಹತ್ತು ಕಿ.ಮಿ ವರೆಗೆ ಪ್ರಾಣಿಗಳು, ಜನರಿರುವುದು ಕಾಣುತ್ತದೆ, ಅಂಥ ಲೈಟ್ ಹಾಕಿ ಭೇಟೆಯಾಡುತ್ತಿದ್ದಾರೆ. ಅರಣ್ಯ ಇಲಾಖೆಯಲ್ಲಿ ಇವರನ್ನು ಹೀಗೆ ಬಿಟ್ಟುಬಿಟ್ಟರೆ ಅಭಯಾರಣ್ಯ ಮಾಡುವುದರಲ್ಲೇನು ಅರ್ಥವಿದೆ? ದಯವಿಟ್ಟು ಆ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇದು ಹೌದು ಅಲ್ಲವೋ ಎಂಬುದಕ್ಕೆ ಒಂದು ಎನ್‌ಕ್ವೆರಿ ಮಾಡಿಸಿ. ಒಬ್ಬ ಲೋಕಲ್ ಹುಡುಗ ಇನ್ನೊಬ್ಬ ಜಿಲ್ಲಾಮಟ್ಟದ ಅಧಿಕಾರಿ.

ಶ್ರೀ ಸಿ.ಚೆನ್ನಿಗಪ್ಪ: ಮಾನ್ಯ ಸದಸ್ಯರು ಇವತ್ತು ಆ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಕಾನೂನು ಪ್ರಕಾರ ನಮ್ಮ ಇಲಾಖೆಯ ಸಿಸಿಎಫ್‌ನವರು ಕೂಡಲೇ ಅದನ್ನು ಎನ್‌ಕ್ವೈರಿ ಮಾಡಿ, ಅವರು ತಪ್ಪು ಮಾಡಿದ್ದರೆ ಮೂರುದಿವಸಗಳೊಳಗೆ ಕ್ರಮ ತೆಗೆದುಕೊಳ್ಳುತ್ತೇನೆ. ತಪ್ಪು ಮಾಡಿಲ್ಲದಿದ್ದರೆ ಕ್ರಮ ತೆಗೆದುಕೊಳ್ಳಲಾಗುವುದಿಲ್ಲ. ತಪ್ಪು ಮಾಡಿದ್ದರೆ ಕ್ರಮ ತೆಗೆದುಕೊಳ್ಳದೆ ಸುಮ್ಮನಿರುವ ಪ್ರಶ್ನೆಯೇ ನಮ್ಮಲಿಲ್ಲ..

ಶ್ರೀ ಹೆಚ್.ಸಿ. ಬಾಲಕೃಷ್ಣ: ಬಿಟ್ಟು ಕಳುಹಿಸಿದ ಆ ಅಧಿಕಾರಿಯ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತಾರೆಂಬುದನ್ನು ಹೇಳಬೇಕು.

ಅಧ್ಯಕ್ಷರು: ಬಿ. ನಂಜಾಮರಿಯವರು ಬಂದಿಲ್ಲ. ಮಾನ್ಯ ಗೋಪಾಲ್ ಪೂಜಾರಿಯವರು

(ಉ) ವಿಷಯ: ಗೇರು ಅಭಿವೃದ್ಧಿ ನಿಗಮದಲ್ಲಿ ಸಾಕಷ್ಟು ಅವ್ಯವಹಾರವಾಗಿದೆ ಎನ್ನಲಾದ ಬಗ್ಗೆ.

ಶ್ರೀ ಕೆ ಗೋಪಾಲ ಪೂಜಾರಿ (ಕಾರ್ಕಳ): ಮಾನ್ಯ ಅಧ್ಯಕ್ಷರೆ, ಕುಂದಾಪುರ ತಾಲ್ಲೂಕಿನ ಗೇರು ನಿಗಮ ವಿಭಾಗದಲ್ಲಿ ಬಹಳಷ್ಟು ಅವ್ಯವಹಾರಗಳು ನಡೆದಿವೆ ಎನ್ನುವ ದೂರುಗಳು ಬಂದಿವೆ. ಗೇರು ಪ್ಲಾಂಟೀಷನ್ ಕೊಡುವ ಸಂದರ್ಭದಲ್ಲಿ ಹೋದ ಸಾರಿ ಯುನಿಟ್ ನಂ 78 (ಬಿ) ನಲ್ಲಿ 26 ಹೆಕ್ಟೇರ್‌ರಲ್ಲಿ 2,13,000 ಆದರೆ, ಈ ಸಾರಿ 1,66,990, 24

ಪರ್ಸೆಂಟ್ ಲೋಯೆಸ್ಟ್ ಹಾಕಿದವರಿಗೆ ಖಾಯಂ ಮಾಡಿದ್ದಾರೆ. ಅದೇ ರೀತಿ 80ಪಿ, 27 ಹೆಕ್ಟೇರ್‌ನಲ್ಲಿ 1,69,000ಕ್ಕೆ ಕಳೆದ ಸಾರಿ ಟೆಂಡರ್ ಆದರೆ, ಈ ಸಾರಿ 1,09,999 35 ಪರ್ಸೆಂಟ್ ಲೋಯೆಸ್ಟ್ ಹಾಕಿದವರಿಗೆ ಖಾಯಂ ಮಾಡಿದ್ದಾರೆ. ಅದೇ ರೀತಿ 76 (ಬಿ)ನಲ್ಲಿ 65 ಹೆಕ್ಟೇರ್‌ಗೆ 6,07,999 ಕಳೆದ ಸಾರಿ ಟೆಂಡರ್ ಆದರೆ, ಈ ಸಾರಿ ಅದೇ ಜಾಗಕ್ಕೆ 5,18,000 ಟೆಂಡರ್ ಹಾಕಿದರೆ 15 ಪರ್ಸೆಂಟ್ ಲೋಯೆಸ್ಟ್‌ರವರಿಗೆ ಖಾಯಂ ಮಾಡಲಿಲ್ಲ, 35 ಪರ್ಸೆಂಟ್‌ರವರಿಗೆ ಖಾಯಂ ಮಾಡಿದ್ದಾರೆ. 15 ಪರ್ಸೆಂಟ್‌ರವರಿಗೆ ಖಾಯಂ ಮಾಡದೆ ಮರುಟೆಂಡರ್ ಮಾಡಿದ್ದಾರೆ. ಅದೇ ರೀತಿ 153.5 ನಲ್ಲಿ 7,27,000 ಹೋದ ಸಾರಿ ಟೆಂಡರ್ ಆದರೆ, ಈ ಸಾರಿ 6,03,000ಕ್ಕೆ 17 ಪರ್ಸೆಂಟ್ ಲೋಯೆಸ್ಟ್ ಟೆಂಡರ್ ಆದರೆ ಅದನ್ನು ಖಾಯಂ ಮಾಡಲಿಲ್ಲ, 35 ಮತ್ತು 24 ಪರ್ಸೆಂಟ್ ಆದವರಿಗೆ ಖಾಯಂ ಮಾಡಿದ್ದಾರೆ, ಅದಕ್ಕಿಂತ ಲೋಯೆಸ್ಟ್ 15 ಪರ್ಸೆಂಟ್, 17 ಪರ್ಸೆಂಟ್ ಆದರೆ ಖಾಯಂ ಮಾಡದೆ ಮರುಟೆಂಡರ್ ಕರೆದಿದ್ದಾರೆ. ಇದರಲ್ಲಿ ಅವ್ಯವಹಾರವಾಗಿದೆ ಎನ್ನುವ ದೂರು ಬಹಳಷ್ಟು ಕೇಳಿಬರುತ್ತಿದೆ. ಈ ಬಗ್ಗೆ ಪುನರ್ ತನಿಖೆಯಾಗಬೇಕು, ಇಲಾಖೆ ವತಿಯಿಂದ ತನಿಖೆಯಾಗಬೇಕಾಗುತ್ತದೆ. ಅದಲ್ಲದೆ ಈ ತಾಲ್ಲೂಕಿನ ಗೇರು ನಿಗಮದಲ್ಲಿ ಗೇರು ಗಿಡಗಳಿಗೆ ಗೊಬ್ಬರ ಹಾಕುವಂತಹ ವ್ಯವಸ್ಥೆ ಇದೆ. ಇದನ್ನು ಮೈನ್ ದಾರಿಯಲ್ಲಿ ಹಾಕುತ್ತಾರೆಯೇ ಹೊರತು, ಒಳಗಡೆ ಹೆಚ್ಚು ಮುತುವರ್ಜಿಯನ್ನು ವಹಿಸುವುದಿಲ್ಲ. ಈ ಬಗ್ಗೆಯೂ ಕೂಡ ತನಿಖೆಯಾಗಬೇಕಾಗುತ್ತದೆ. ಸತ್ತಗಿಡಗಳ ಜಾಗದಲ್ಲಿ ಪುನರ್ ಸಸಿ ನೆಡುವೆ ವ್ಯವಸ್ಥೆ ಇದೆ. ಅದನ್ನು ನೆಡುವ ಸಂದರ್ಭದಲ್ಲಿ ಹೊಂಡವನ್ನು ಎಷ್ಟು ಅಗಲ ಹಾಗೂ ಆಳಕ್ಕೆ ಮಾಡುತ್ತಾರೆನ್ನುವ ಬಗ್ಗೆ ತನಿಖೆಯಾಗಬೇಕಾಗುತ್ತದೆ. ಈ ಗೇರು ನಿಗಮಗಳ ಘಟಕಗಳ ವ್ಯವಸ್ಥೆಯನ್ನು, ಇದನ್ನು ಹದ್ದುಬಸ್ತಿನಲ್ಲಿಡಲು ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿದೆ? ಇದನ್ನು ನೋಡುವ ವ್ಯವಸ್ಥೆ ಯಾರಿಗೆ ಇದೆ ಎಂಬುದು ನಮ್ಮ ಗಮನಕ್ಕೆ ಬರುವುದಿಲ್ಲ. ಸರ್ಕಾರದ ಬಹಳಷ್ಟು ಹಣ ಈ ರೀತಿ ದುರುಪಯೋಗವಾಗುತ್ತಿದೆ, ಟೆಂಡರ್ ಆಗುವಾಗ ರಾಜಿಸೂತ್ರವಾಗುತ್ತದೆ' ಇದರಿಂದ ಸರ್ಕಾರಕ್ಕೆ ಬಹಳಷ್ಟು ನಷ್ಟವಾಗುತ್ತದೆ. ಬಹುಶಃ ಈ ಬಗ್ಗೆ ಇಲಾಖೆಯ ವತಿಯಿಂದ ತನಿಖೆ ಮಾಡಿಸಿ, ಕೂಲಂಕುಷವಾಗಿ ತಪ್ಪು ಎಲ್ಲಿ ಆಗಿದೆ ಎಂಬ ಬಗ್ಗೆ ತನಿಖೆಯಾಗಬೇಕೆಂದು ಮಾನ್ಯ ಅರಣ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಶ್ರೀ ಸಿ.ಚೆನ್ನಗಿಪ್ಪ (ಅರಣ್ಯ ಸಚಿವರು): ಅಧ್ಯಕ್ಷರೇ, ಮಾನ್ಯ ಸದಸ್ಯರು ಗೇರು ಬೀಜ ಆಕ್ಷನ್ ಮಾಡುವ ವಿಚಾರದಲ್ಲಿ ಟೆಂಡರ್ ಕಡಿಮೆ ಮಾಡಿದ್ದಾರೆಂದು ಅಪಾದನೆ ಮಾಡುತ್ತಿದ್ದಾರೆ. ಆದರೆ ಮೊದಲನೆ ಟೆಂಡರನ್ನು

ದಿ:5.2.2005ರಲ್ಲಿ ಕರೆದು, ಅದೇ ಘಟಕಗಳನ್ನು 78(ಬಿ) ಮತ್ತು 80 (ಬಿ) ಗುತ್ತಿಗೆದಾರರು ಯಾರೂ ಆ ಟೆಂಡರ್‌ಗೆ ಬಿಡ್ ಮಾಡಲಿಲ್ಲ, ಅವರು ಎರಡನೇ ಸಾರಿ ಬಿಡ್ ಕರೆದಾಗ, ಅದರಲ್ಲಿ ಹೂವುಗಳು ಬಂದು ಪೀಚ್ ಆಗಿ ಅದನ್ನು ನೋಡಿಕೊಂಡು ಚೆನ್ನಾಗಿದೆಯಾದರೆ ಮಾತ್ರ ಅಲ್ಲಿ ವ್ಯಾಪಾರಕ್ಕೆ ಜನರು ಬರುತ್ತಾರೆ. ಟೆಂಡರ್ ಕೂಗಲು ಬರುತ್ತಾರೆ. ಬೆಳೆ ಬಂದರೆ ಮಾತ್ರ ಕೂಗುತ್ತಾರೆ, ಇಲ್ಲದಿದ್ದರೆ ಕೂಗುವುದಿಲ್ಲ. ಮೊದಲನೆ ಟೆಂಡರ್ ಮಾಡಿದಾಗ ಯಾರೂ ಬರಲಿಲ್ಲ. ಎರಡನೇ ಬಾರಿ ಟೆಂಡರ್ ಕರೆದಾಗ ಬಂದು ಕೂಗಿದರು. ಮೊದಲನೆಯವರು ಘಟಕ 107ಕ್ಕೆ 3,16,801 ರೂಪಾಯಿಗಳಿಗೆ ಕೂಗಿದರೆ, ಎರಡನೇ ಸಾರಿ ಟೆಂಡರ್ ಮಾಡಿದಾಗ ಅವರು 1,74 000 ಸಾವಿರ ರೂಪಾಯಿಗಳಿಗೆ ಕಡಿಮೆಯಾಯಿತು. ಕಾರಣವೇನೆಂದರೆ, ಹೂವುಗಳು ಹೆಚ್ಚಿಗೆ ಬಂದು ಬೀಜ ಹೆಚ್ಚಿಗೆ ಕಂಡದ್ದರಿಂದ ಹೆಚ್ಚಿಗೆ ಟೆಂಡರ್ ಕೂಗುತ್ತಾರೆ. ಹೆಚ್ಚಿಗೆ ಹರಾಜಿನಲ್ಲಿ ಪಾರ್ಟಿಸಿಪೇಟ್ ಮಾಡುತ್ತಾರೆ. ನಾನು ನಮ್ಮ ಅಧಿಕಾರಿಗಳಿಗೆ ಈ ರೀತಿ ಮಾಡುವುದಕ್ಕೆ ಬರುವುದಿಲ್ಲ. ಯಾರದ್ದು ಕಮ್ಮಿ ಇರುತ್ತದೆ. ಒಂದು, ಎರಡು, ಮೂರು ಸಾರಿ ಅವಕಾಶ ಕೊಡಬೇಕು ಎರಡೆರಡು ಸಾರಿ ಮಾಡುವುದು ತಪ್ಪೆಂದು ನಾನು ಹೇಳಿದೆ. ಮತ್ತೆ ಇಂದೂ ಕೂಡ ಅಧಿಕಾರಿಗಳನ್ನು ಕರೆದು ಚರ್ಚೆ ಮಾಡಿ, ಮಾನ್ಯ ಸದಸ್ಯರನ್ನು ಕರೆಯಿಸಿ, ನಾವು ಒಟ್ಟಿಗೆ ಕುಳಿತು, ಆ ಭಾಗದ ಜನರ, ರೈತರು ಹಾಗೂ ಬಿಡ್ಡಸ್ಥರನ್ನು ಕರೆದು, ಯಾವ ರೀತಿಯಾಗಿ ಆಕ್ಷನ್‌ನಲ್ಲಿ ಪಾರ್ಟಿಸಿಪೇಟ್ ಮಾಡಬೇಕೆಂದು ಒಂದು ನಿಯಮವನ್ನು ಮಾಡಿ ಆ ಪ್ರಕಾರ ಮಾಡಲು ವ್ಯವಸ್ಥೆ ಮಾಡುತ್ತೇನೆ.

ಶ್ರೀ .ಕೆ ಗೋಪಾಲ ಪೂಜಾರಿ: ಅಧ್ಯಕ್ಷರೆ, ಟೆಂಡರ್ ಮಾಡುವ ಮೂಲಕ ಈ ಗಡಿ ಗುರುತನ್ನು ನಿಗದಿ ಮಾಡಬೇಕು, ಇಲ್ಲದಿದ್ದರೆ ಇದರಲ್ಲಿ ಯಾರು ಪ್ರಭಾವಿಗಳಿರುತ್ತಾರೆ. ಅವರಿಂದ ಈ ಗಡಿಗುರುತಿನಿಂದ ಪಕ್ಕದಲ್ಲಿ ಸಾಧಾರಣವಾಗಿ ಟೆಂಡರ್ ತೆಗೆದುಕೊಂಡವನಿಗೆ ಅನ್ಯಾಯವಾಗುತ್ತದೆ. ಆದುದರಿಂದ ಗಡಿಗುರುತನ್ನು ಟೆಂಡರ್ ಮಾಡುವ ಮುನ್ನ ನಿಗದಿ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ನಂತರ ಗಡಿಗುರುತನ್ನು ನಿಗದಿ ಮಾಡಿದರೆ ಬಹುಶಃ ಸಾಧಾರಣವಾಗಿ ಒಂದು ಟೆಂಡರ್ ಪಡೆದವನಿಗೆ ಅನ್ಯಾಯವಾಗುತ್ತದೆ. ಅವನಿಗೆ ನಷ್ಟವಾಗುತ್ತದೆ. ಆದುದರಿಂದ ಗಡಿಗುರುತನ್ನು ಕೂಡ ಮುಂಚಿತವಾಗಿ ನಿಗದಿಪಡಿಸಬೇಕಾಗುತ್ತದೆ.

ಶ್ರೀ.ಸಿ. ಚೆನ್ನಿಗಪ್ಪ: ಮಾನ್ಯ ಅಧ್ಯಕ್ಷರೆ, ಗಡಿಗುರುತನ್ನು ಮಾರ್ಕ್ ಮಾಡಿದ ನಂತರ ಅದು 500–1000 ಹೆಕ್ಟೇರ್ ಬರಲಿ, ಅದನ್ನು ಟೆಂಡರ್‌ನಲ್ಲಿ

ನಮೂದಿಸಿ ಜನರಿಗೆ ಗೊತ್ತಾಗುವಂತೆ ಜಾಹಿರಾತುಪಡಿಸಿ, ತದ ನಂತರ ಆಕ್ಷನ್ ಮಾಡುವ ಕೆಲಸವನ್ನು ಮಾಡುತ್ತೇವೆ.

ಶ್ರೀ ಕೆ. ಗೋಪಾಲ ಪೂಜಾರಿ: ತನಿಖೆ ಮಾಡಿಸಬೇಕು.

ಶ್ರೀ ಚೆನ್ನಿಗಪ್ಪ: ತನಿಖೆಯನ್ನು ಮಾಡಿಸುತ್ತೇನೆ.

ಅಧ್ಯಕ್ಷರು: ಸಿ.ಎಸ್. ನಾಡಗೌಡರಿಲ್ಲ, ಮಾನ್ಯ ಜಯಪ್ರಕಾಶ ಹೆಗಡೆಯವರು.

(ಊ) **ವಿಷಯ:** ಸಿಮೆಂಟ್ ದರ ಹೆಚ್ಚಳದ ಬಗ್ಗೆ.

ಶ್ರೀ ಕೆ. ಜಯಪ್ರಕಾಶ ಹೆಗಡೆ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೆ, ಅನೇಕ ಸಿಮೆಂಟ್ ಕಾರ್ಖಾನೆಗಳು ರಾಜ್ಯದಲ್ಲಿವೆ. ಇವತ್ತು ರೂ. 140–200 ವರೆಗೆ ಸಿಮೆಂಟ್‌ನ ಧಾರಣೆ ಏರಿದೆ. ಆದರೆ 220 ರೂ.ಗಳನ್ನು ಕೊಟ್ಟರೂ ಸಿಗುವ ಪರಿಸ್ಥಿತಿ ಇಲ್ಲ, ಏಕೆಂದರೆ, ರಾಜ್ಯದಿಂದ ಹೊರಗಡೆ ಸಿಮೆಂಟ್ ಹೋಗುತ್ತದೆ. ಇಲ್ಲಿ ಸಿಗುವುದಿಲ್ಲ. ಇದರಿಂದ ಅಭಿವೃದ್ಧಿ ಕಾಮಗಾರಿಗಳೆಲ್ಲಾ ಸ್ಥಗಿತಗೊಳ್ಳುವುದಾಗಿದೆ. ಕೇವಲ ಮನೆ ಕಟ್ಟುವುದು ಮಾತ್ರವಲ. ಎಲ್ಲಾ ಅಭಿವೃದ್ಧಿ ಕೆಲಸಗಳು ಸ್ಥಗಿತಗೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ನಿಮ್ಮ ಇರಿಗೇಷನ್ ಪ್ರಾಜೆಕ್ಟ್‌ಗಳೆಲ್ಲಾ ನಿಲ್ಲುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ, ಈಗ ಎಸ್ಕಲೇಷನ್ ಕೇಳುವುದಕ್ಕೆ ಪ್ರಾರಂಭ ಮಾಡುತ್ತಾರೆ ಅದಕ್ಕೋಸ್ಕರ ನಾನು ಸರ್ಕಾರವನ್ನು ಕೇಳವುದೇನೆಂದರೆ, ಇಲ್ಲೊಂದು ಲಾಬಿ ಇದೆ. ಸಿಮೆಂಟ್ ಮ್ಯಾನುಫಾಕ್ಚರರ್ಸ್ ಲಾಬಿಯೇ ಇದೆ. ಅವರು ಪ್ರತಿ ವರ್ಷ ಇದನ್ನು ಫ್ಲುಕ್ಚುಯೇಟ್ ಮಾಡುತ್ತಲೇ ಇರುತ್ತಾರೆ. ಇದರಲ್ಲಿ ದೊಡ್ಡ ದೊಡ್ಡ ವ್ಯಕ್ತಿಗಳೆಲ್ಲಾ ಇದ್ದಾರೆ; ಇದು ಪ್ರತಿ ವರ್ಷ ನಡೆಯುವುದು. ನೀವು ರಾಜ್ಯದಲ್ಲಿರುವ ಸಿಮೆಂಟ್ ಕಾರ್ಖಾನೆಗಳಿಂದ ರಾಜ್ಯದಲ್ಲಿ ಸಿಮೆಂಟ್ ದೊರೆಯುವ ಪ್ರಯತ್ನ ಮಾಡಬೇಕಾಗುತ್ತದೆ. ಅದು ಕಷ್ಟ ಇದೆ ಎಂಬುದು ನನಗೆ ಗೊತ್ತಿದೆ. ಈ ಪರಿಸ್ಥಿತಿ ಹತೋಟಿಯಲ್ಲಿ ತರುವುದಕ್ಕೆ ಸರ್ಕಾರವೇನು ಕ್ರಮ ತೆಗೆದುಕೊಳ್ಳತ್ತದೆಂದು ಕೇಳುತ್ತಿದ್ದೇನೆ.

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು): ಮಾನ್ಯ ಅಧ್ಯಕ್ಷರೆ, ಇದು ಕೈಗಾರಿಕಾ ಇಲಾಖೆಗೆ ಬರುವ ಪ್ರಶ್ನೆಯಾಗಿದ್ದು, ಮಾನ್ಯ ಸಚಿವರು ಇವತ್ತು ಇಲ್ಲ, ಸಿಮೆಂಟ್ ಆರ್ಡರ್ 1983 ನಿರಸನಗೊಳಿಸಿದ ಮೇಲೆ ನಮ್ಮ ಇಲಾಖೆಗೆ ಆ ದರವನ್ನು ನಿಯಂತ್ರಣ ಮಾಡುವುದಕ್ಕೆ ಅಧಿಕಾರವಿಲ್ಲ. ಆದರೂ ಸರ್ಕಾರ ಸಂಬಂಧಿಸಿದ ಎಲ್ಲಾ ಕಾರ್ಖಾನೆಯ ಮಾಲೀಕರು ಹಾಗೂ ಸಂಬಂಧಿಸಿದವರನ್ನು ಕರೆದು ಏನು ಬೆಲೇ ರೂ. 140–220 ಹೆಚ್ಚಾಗಿದೆ ಎಂದು ಹೇಳುತ್ತಾರೆ. ಅದನ್ನು ಕಡಿಮೆ ಮಾಡುವುದಕ್ಕೆ ಮತ್ತು ಅದು ಯಾವ ಕಾರಣಕ್ಕಾಗಿ ಮಾಡಿದ್ದಾರೆನ್ನುವ ಬಗ್ಗೆ ಸಭೆ